ಶಿವಶಕ್ತಿ ಪ್ರಾಂ ಎಂದು ಕೇಕೆ ಹಾಕಿ ಮುನ್ನಡೆಯುತ್ತಿತ್ತು. ರಾತ್ರಿಯೆಲ್ಲ ಕುಲುಕಾಡುವ ಬಸ್ಸಿನೊಳಗೆ ಡೊರ್ ಎಂದು ಗೊರಕೆ ಹೊಡೆಯುತ್ತ, ಅಳುವ ಮಗುವನ್ನು ಸಮಾಧಾನ ಪಡಿಸುತ್ತಾ, ಪಕ್ಕದಲ್ಲಿರುವ ಹೊಸ ಹೆಂಡತಿಯನ್ನು ತಬ್ಬುತ್ತಾ, ಕರ್ಟನ್ ಮುಚ್ಚಿ ಯಾರೊಂದಿಗೋ ಹರಟುತ್ತಾ ನಿದ್ರಿಸುವ ಮಂದಿ ಎಂಟನೇ ಮೈಲಿಯೆಂಬ ಮಹಾನಗರದ ಮೊದಲ ಸ್ಟಾಪು ಬಂದೊಡನೆ ಪಕ್ಕಾ ಬೆಂಗಳೂರಿಗರಾಗಿ ಬದಲಾಗುವ ಪರಿಯ ನೋಡುವುದೇ ಅವನಿಗೆ ಗಮ್ಮತ್ತೆನಿಸುತ್ತಿತ್ತು.

ಈ ದಿನ ಬೆಂಗಳೂರಿನಲ್ಲಿ ಉಳಿದರೆ ಮಾರನೇ ದಿನ ಊರಿಗೆ ಹೋಗವ ಸೌಭಾಗ್ಯ ಜಬ್ಬರನದಾಗಿತ್ತು. ರಾತ್ರಿ ಬೆಂಗಳೂರಿಂದ ಹೊರಟ ಶಿವಶಕ್ತಿ ಹಗಲಿನ ಹೊತ್ತಿಗೆ ಹೊಸನಗರ ತಲುಪುತ್ತಿತ್ತು. ಅಲ್ಲಿನ ಕಲ್ಲೋಣಿ ಬಯಲಲ್ಲಿ ಹಗಲಿಡೀ ನಿಂತು ತೂಕಡಿಸಿ, ಮತ್ತೆ ರಾತ್ರಿ ಬೆಂಗಳೂರಿನತ್ತ ಓಡುತ್ತಿತ್ತು. ಕಲಾಸೀಪಾಳ್ಯದ ಗಲ್ಲಿಯೊಂದರ ಮೂಲೆಯಲ್ಲಿ ಅದನ್ನು ನಿಲ್ಲಿಸಿ, ಮುಖ ತೊಳೆದು, ತಳ್ಳುಗಾಡಿಯೊಂದರಲ್ಲಿ ಎಗ್ ರೈಸು ತಿಂದು ಬಂದರೆ ಸಾಕು, ದಿವಿನಾದ ನಿದ್ರೆಯೊಂದು ಜಬ್ಬರನನ್ನೂ, ನಲ್ಲತಂಬಿಯನ್ನೂ ಆವರಿಸಿಕೊಂಡು ಬಿಡುತ್ತಿತ್ತು. ಸ್ಲೀಪರಿನ ಯಾವುದೋ ಒಂದು ಸೀಟಿನ ಮೇಲೆ ಲುಂಗಿ ಹಾಸಿಕೊಂಡು ಇಬ್ಬರೂ ಗಡದ್ದಾಗಿ ಮಲಗಿಬಿಡುತ್ತಿದ್ದರು. 'ದುಡ್ಕೊಟ್ಟು ಬುಕ್ ಮಾಡಿದೋರಿಗೆ ಒಂದೇ ಸೀಟು. ನಮ್ಗೆ ನೋಡು, ಎಲ್ಲದೂ ನಮ್ದೇ ಸೀಟು' ಎಂದು ನಲ್ಲತಂಬಿ ಖುಷಿಯಲ್ಲಿ ಹೊದಿಕೆ ಎಳೆದುಕೊಳ್ಳುತ್ತಿದ್ದ. ಅಕ್ಕಪಕ್ಕದ ಸೀಟುಗಳಲ್ಲಿ ಮಲಗಿಕೊಂಡ ಅವರಿಬ್ಬರೂ ಸ್ವಲ್ಪ ಹೊತ್ತು ಅದೂ ಇದೂ ಹರಟುತ್ತಿದ್ದರು. ಶಹರದ ಮಾನಸಿಕ ಸುಸ್ತು ಹಾಗೂ ಹಳ್ಳಿಯ ಬೆವರು.. ಇವೆರಡೂ ವಿಷಯಗಳಾಗಿ ಅವರ ಹರಟೆಗೆ ಒದಗಿ ಬರುತ್ತಿದ್ದವು. ಊರಿನ ಯಾವ್ಯಾವುದೋ ಹುಡುಗಿಯರ ಜೊತೆ ಹರಟುತ್ತಾ ಸಮಯ ದೂಡುತ್ತಿದ್ದ ನಲ್ಲತಂಬಿಗೆ ಜಬ್ಬರ್ 'ಸಾಲೇ, ಬೇಗ ಒಂದು ಶಾದೀ ಮಾಡ್ಕೋ' ಎಂದು ಗದರುತ್ತಿದ್ದ. ತಂಬಿಯಾದರೂ ಹರಟಿ, ಫೋನಿಟ್ಟ ಹುಡುಗಿಯರ ಪೈಕಿ ಯಾರೋ ಒಬ್ಬರನ್ನು ಕನಸಿಗೆಳೆದುಕೊಂಡು ನಿದ್ರೆಗೆ ಜಾರುತ್ತಿದ್ದ.

ನಿದ್ರೆಯು ಚರಮ ಸೀಮೆಯನ್ನು ತಲುಪಿದ ಕೆಲವೊಂದು ಕ್ಷಣಗಳಲ್ಲಿ ಧುತ್ತನೆ ಬೆಚ್ಚಿ ಎದ್ದುಕೂರುತ್ತಿದ್ದ ಜಬ್ಬರ್. ಎದೆಗೂಡು ಹೊಳೆಯುವ, ಆಕಾಶ ನೀಲಿಯ ಟೀ ಶರ್ಟು ತೊಟ್ಟ ಹುಡುಗನೊಬ್ಬ ಅವನ ಕನಸಿನಲ್ಲಿ ಬರುತ್ತಿದ್ದ. ಮೆಲ್ಲನೆ ಬಂದು ಬಸ್ಸನ್ನೇರಿ ಡ್ರೈವರ್ ಸೀಟಿನಲ್ಲಿ ಕುಳಿತ ಜಬ್ಬರ್ ನೆಡೆ ನೋಡಿ ನಗುತ್ತಿದ್ದ. ಹಾಗೆ ಅವನು ನೋಡುತ್ತಿರುವಂತೆಯೇ ಹಿಂಬದಿಗೆ ನಡೆದು, ಅಲ್ಲಿ ಎತ್ತರದ ಛಾವಣಿಗೆ ಕರ್ಟನ್ ಸುತ್ತಿ ಕುತ್ತಿಗೆಗೆ ಬಿಗಿದು ನೇತಾಡುತ್ತಿದ್ದ. ಅವನ ಕೈ, ಕಾಲು ಫಿಟ್ಸು ಬಂದಂತೆ ವಿಲವಿಲಗುಟ್ಟುತ್ತಿದ್ದವು. ಕಣ್ಣಿನ ಬೇಳೆಗಳು ವಿಕಾರವಾಗಿ ಮೇಲೆ ಸಿಕ್ಕಿಕೊಳ್ಳುತ್ತಿದ್ದವು. ನೋಡನೋಡುತ್ತಲೇ ವಿಲಗುಟ್ಟುವ ದೇಹ ಸ್ತಬ್ಧವಾಗುತ್ತಿತ್ತು. ಇದೆಲ್ಲವನ್ನೂ ಕುಳಿತಲ್ಲಿಂದಲೇ ನೋಡುತ್ತಾ ಅಲುಗಾಡಲಾರದ ಜಬ್ಬರ್ ಜೀವ ಹೋದ ಬಳಿಕ ಎದ್ದು ಕೂರುತ್ತಿದ್ದ.

ತಾನು ಏನೇ ಮಾಡಿದರೂ ಬಿಡಿಸಿಕೊಳ್ಳಲಾಗದ, ಜನುಮದುದ್ದದ ದುಃಸ್ವಪ್ನವಿದೆಂದು ಅವನಿಗೂ ಗೊತ್ತಿತ್ತು. ಸತ್ಯ ಘಟನೆಗಳೊಂದಿಗೆ ಥಳಕು ಹಾಕಿಕೊಂಡ ಸ್ವಪ್ನಗಳಿಗೆ ಸಾವಿರುವುದಿಲ್ಲ.

ಅರವಿಂದ!

ಜಬ್ಬರ್ ಆಗಷ್ಟೇ ಬಸ್ಸೋಡಿಸಲು ಆರಂಭಿಸಿದ ದಿನಗಳಲ್ಲಿ ಕಾರಣಗಿರಿಯ ಸೌಕಾರರು ಅವನ ನೆರವಿಗೆಂದು ನೇಮಿಸಿದ್ದ ಸಹಾಯಕ. ಇನ್ನೂ ಪಳಗದ ಬೆಂಗಳೂರಿನ ರಸ್ತೆಗಳಲ್ಲಿ ಮಾತೆತ್ತಿದರೆ ಮೈಮೇಲೇ ಬರುವ ಆಟೋ ಡ್ರೈವರುಗಳಿಂದ, ಸಂದಿಯಲ್ಲಿ ನುಗ್ಗಿ, ಜೀವ ಬಾಯಿಗೆ ಬರಿಸಿ, ಕೊನೆಗೆ ಕಾಲರ್ ಪಟ್ಟಿಗೇ ಕೈ ಹಾಕುತ್ತಿದ್ದ ಬೈಕಿನವರಿಂದ ಹಾಗೂ ರಾಕ್ಷಸ ಲಾರಿಗಳ ಕಿವಿ ಹಿಂಡೀ ಹಿಂಡೀ ಅಷ್ಟೇ ದೈತ್ಯರಾಗಿರುವ ಬಲಿಷ್ಠ ಡ್ರೈವರುಗಳಿಂದ ಜಬ್ಬರನನ್ನು ರಕ್ಷಿಸುತ್ತಾ, ಡ್ರೈವಿಂಗಿಗೆ ಬೇಕಾದ ಗಟ್ಟಿ ಗುಂಡಿಗೆಯೊಂದನ್ನು ಅವನು ಬೆಳೆಸಿಕೊಳ್ಳಲು ಅವಕಾಶ ಮಾಡಿಕೊಟ್ಟವನೇ ಈ ಅರವಿಂದ. ತನ್ನ ಮಗನಿಗಿಂತ ದೊಡ್ಡವನಾದ, ತಮ್ಮನಿಗಿಂತ ಚಿಕ್ಕವನಾದ ಅವನು ಜಬ್ಬರನಿಗೆ ಒಮ್ಮೆ ಮಗನಂತೆ, ಮತ್ತೊಮ್ಮೆ ತಮ್ಮನಂತೆ ಕಾಣಿಸುತ್ತಿದ್ದ. ಹೆತ್ತಬ್ಬೆಯಿಲ್ಲದೆ ಮಲತಾಯಿಯ ದಬ್ಬಾಳಿಕೆಯಲ್ಲಿ ಬೆಳೆದವನಿಗೆ ವಾರಕ್ಕೊಮ್ಮೆಯೂ ಮನೆಗೆ ಹೋಗದಂಥಾ ನೌಕರಿಯೊಂದು ಬೇಕಿತ್ತು. ಅದನ್ನು 'ಶಿವಶಕ್ತಿ' ಒದಗಿಸಿತ್ತು. ರಾತ್ರಿಯ ಬಹು